# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 943 |
| ಸದಸ್ಯರ ಹೆಸರು | ಡಾ.ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 20.08.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸುಳ್ಳು ದಾಖಲೆಗಳನ್ನು ಪಡೆದುಕೊಂಡು ನೈಜತೆಯನ್ನು ಪರಿಶೀಲಿಸದೆ ಹೆಗ್ಗಡದೇವನಕೋಟೆ, ತಹಶೀಲ್ದಾರ್ ಹಾಗೂ ಕಸಬಾ ಹೋಬಳಿ ಉಪ ತಹಶೀಲ್ದಾರ್ ಮನಬಂದಂತೆ ವಂಶವೃಕ್ಷ ದೃಢೀಕರಣ ಪತ್ರಗಳನ್ನು ನೀಡುವ ಮೂಲಕ ನಿಯಮಗಳನ್ನು ಉಲ್ಲಂಘನೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಇದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು: (ಮಾಹಿತಿ ನೀಡುವುದು) | ಬಂದಿದೆ.<br><br>ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಆಡಳಿತ ಅಧಿಕಾರಿಯವರಿಂದ ಸ್ವೀಕೃತವಾದ ವರದಿಯನ್ನು ಪರಿಶೀಲಿಸಿ, ಶ್ರೀಮತಿ ವಿಜಯ ಎಂ ಬಿನ್ ಲೇ ಟಿ.ಎಸ್. ಉಲಗಶೆಟ್ಟಿ, ಮುಸ್ಲಿಂ ಬ್ಲಾಕ್, ಹೆಚ್.ಡಿ.ಕೋಟೆ ಟೌನ್ ರವರು ಪಡೆದಿರುವ ಅರ್ಜಿ ಸಂಖ್ಯೆ:ಆರ್‌ಡಿ 0038495342146 ದಿನಾಂಕ:14-08-2024 ರ ವಂಶವೃಕ್ಷ ದೃಢೀಕರಣ ಪತ್ರವು ನೈಜತೆಯಿಂದ ಕೂಡಿರುವುದಿಲ್ಲ. ಆದ್ದರಿಂದ ಸದರಿ ವಂಶವೃಕ್ಷವನ್ನು Login ನಿಂದ Invalid ಮಾಡಿ ರದ್ದುಗೊಳಿಸಲು ಕ್ರಮ ವಹಿಸಲಾಗುತ್ತಿದೆ. |
| (ಆ) | ಹೆಗ್ಗಡದೇವನಕೋಟೆ ತಹಶೀಲ್ದಾರ್ ದಿನಾಂಕ:14.08.2024 ರಂದು ತಹಶೀಲ್ದಾರ್ ಕಛೇರಿ ಕಸಬಾ ಹೋಬಳಿ ಉಪ ತಹಶೀಲ್ದಾರರು ನೀಡಿರುವ ವಂಶವೃಕ್ಷ ಪತ್ರ ಸಂಖ್ಯೆ:ಆರ್.ಡಿ.0038495342146 ಯಾವ ದಾಖಲೆಗಳನ್ನು ಪಡೆದು ಕೊಂಡಿರುತ್ತಾರೆ; (ಮಾಹಿತಿ ನೀಡುವುದು) | ಅರ್ಜಿದಾರರು ಹಾಜರುಪಡಿಸಿರುವ ಆಧಾರ್ ಕಾರ್ಡ್, ಮರಣ ದೃಢೀಕರಣ ಪತ್ರಗಳು, ನೋಟರಿ ಪ್ರಮಾಣ ಪತ್ರ ಹಾಗೂ ರಾಜಸ್ವ ನಿರೀಕ್ಷಕರು ಮತ್ತು ಗ್ರಾಮ ಆಡಳಿತಾಧಿಕಾರಿಗಳು ಸ್ಥಳೀಯ ವರದಿಯನ್ನು ಪಡೆಯಲಾಗಿರುತ್ತದೆ. |
| (ಇ) | ಅರ್ಜಿದಾರರು ನೀಡಿರುವ ದಾಖಲೆಗಳನ್ನು ನೈಜತೆಯನ್ನು ಪರಿಶೀಲನೆ ಮಾಡಲಾಗಿದೆಯೇ; ಮಾಡಿದ್ದಲ್ಲಿ, ಮಾಹಿತಿ ನೀಡುವುದು; | ಲಭ್ಯ ದಾಖಲೆಗಳು ಹಾಗೂ ರಾಜಸ್ವ ನಿರೀಕ್ಷರಕ ವರದಿಯಂತೆ ನೈಜತೆಯನ್ನು ಪರಿಶೀಲಿಸಲಾಗಿರುತ್ತದೆ.<br><br>ಅರ್ಜಿದಾರರ ಹೆಸರು ಮತ್ತು ವಿಳಾಸ ಸರಿಯಾಗಿರುತ್ತದೆ. ಆದರೆ ಅರ್ಜಿದಾರರು ಆಧಾರ್ ಕಾರ್ಡ್ ಮತ್ತು ಪಡಿತರ ಚೀಟಿ ಬದಲಿಸಿಕೊಂಡಿರುತ್ತಾರೆ. |
| (ಈ) | ನೈಜತೆಯನ್ನು ಪರಿಶೀಲನೆ ಮಾಡದೇ ವಂಶವೃಕ್ಷ ದೃಢೀಕರಣ ಪತ್ರ ನೀಡಿದ್ದರೆ ಅದನ್ನು ರದ್ದುಪಡಿಸಿ ಸಂಬಂಧಪಟ್ಟ ಅರ್ಜಿದಾರರು ಹಾಗೂ ತಹಶೀಲ್ದಾರರ ಹಾಗೂ ಕಸಬಾ ಹೋಬಳಿ ತಹಶೀಲ್ದಾರರ ವಿರುದ್ಧ ಸರ್ಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದೇ? (ಮಾಹಿತಿ ನೀಡುವುದು) | ಶ್ರೀಮತಿ ವಿಜಯ ಎಂ ಬಿನ್ ಲೇ ಟಿ.ಎಸ್. ಉಲಗಶೆಟ್ಟಿ, ಮುಸ್ಲಿಂ ಬ್ಲಾಕ್, ಹೆಚ್.ಡಿ.ಕೋಟೆ ಟೌನ್ ರವರು ಪಡೆದಿರುವ ಅರ್ಜಿ ಸಂಖ್ಯೆ:ಆರ್ ಡಿ0038495342146 ದಿನಾಂಕ:12-08-2024 ರಂದು ಅರ್ಜಿ ಸಲ್ಲಿಸಿದ್ದು, ಸದರಿ ವಂಶವೃಕ್ಷವು ಗ್ರಾಮ ಆಡಳಿತ ಅಧಿಕಾರಿ ಮತ್ತು ರಾಜಸ್ವ ನಿರೀಕ್ಷಕರ ಶಿಫಾರಸ್ಸಿನ ಮೇರೆಗೆ ದಿನಾಂಕ:14-08-2024 ರಂದು ವಂಶವೃಕ್ಷ ದೃಢೀಕರಣ ಪತ್ರವು |

| | | |
|---|---|---|
| | | ಅನುಮೋದನೆಗೊಂಡಿರುತ್ತದೆ. ಆದರೆ ಸದರಿ ವಂಶವೃಕ್ಷದೊಂದಿಗೆ ಸಲ್ಲಿಸಿರುವ ದಾಖಲೆಗಳು ಸೃಷ್ಟಿಸಿಕೊಂಡಿರುವ ನಕಲಿ ದಾಖಲೆಗಳಾಗಿರುವುದರಿಂದ ಸದರಿ ವಂಶವೃಕ್ಷವನ್ನು ರದ್ದುಪಡಿಸಬೇಕೆಂದು ಶ್ರೀ ಹೆಚ್.ರಾಜ್ ಗೋಪಾಲ್ ಬಿನ್ ಟಿ.ಎಸ್.ಉಲಗಶೆಟ್ಟಿ, ಬೆಂಗಳೂರು ರವರು ದಿನಾಂಕ:21-07-2025 ರಂದು ದೂರು ಸಲ್ಲಿಸಿರುತ್ತಾರೆ. ಸದರಿಯವರ ದೂರಿನ ಸಂಬಂಧ, ಸಂಬಂಧಪಟ್ಟ ಗ್ರಾಮ ಆಡಳಿತ ಅಧಿಕಾರಿ ಮತ್ತು ರಾಜಸ್ವ ನಿರೀಕ್ಷಕರವರು ಸದರಿ ವಂಶವೃಕ್ಷವು ನೈಜತೆಯಿಂದ ಕೂಡಿರುವುದಿಲ್ಲವೆಂದು ತಿಳಿಸಿರುವುದರಿಂದ ವಂಶವೃಕ್ಷವನ್ನು Invalid ಮಾಡಿ ರದ್ದುಗೊಳಿಸಲು ಕ್ರಮ ವಹಿಸಲಾಗುತ್ತಿದೆ.<br><br>ಸದರಿ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ / ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವ ಕುರಿತಂತೆ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ: ಕಂಇ 73 ಎಜೆಎಸ್ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು